**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಪ್ರಾಧಿಕಾರ**

ಸಂಖ್ಯೆ: ಸಚುಆ/ಚುನಾವಣೆ/ಸಂಭಾವನೆ/11/2016

3ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು.
ದಿನಾಂಕ 22.02.2016

# ಸುತ್ತೋಲೆ

ವಿಷಯ: ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ನೇಮಕಾತಿ ಮಾಡಲಾದ ರಿಟರ್ನಿಂಗ್ ಅಧಿಕಾರಿಗಳು ಮುಂಗಡ ಹಣ ಪಡೆಯದಂತೆ ಮತ್ತು ಸಂಘಗಳು /ಸಹಕಾರಿಗಳು ಚುನಾವಣಾ ವೆಚ್ಚಗಳನ್ನು ಸದಸ್ಯರ ಸಂಖ್ಯೆಗಳಿಗನುಗುಣವಾಗಿ ಪಾರದರ್ಶಕವಾಗಿ /ಸ್ಪರ್ಧಾತ್ಮಕ ದರದಲ್ಲಿ ನಿರ್ವಹಿಸುವ ಬಗ್ಗೆ.

ಉಲ್ಲೇಖ:
1) ಪ್ರಾಧಿಕಾರದ ಸಂ:ಸಚುಆ/ಚುನಾವಣೆ ಸಂಭಾವನೆ/11/2013-14 ದಿನಾಂಕ 25-7-2013ರಲ್ಲಿ ಚುನಾವಣೆಯಲ್ಲಿ ರಿಟರ್ನಿಂಗ್ ಆಫೀಸರ್ಸ್ ಮತ್ತು ಇತರೆ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಸಂಭಾವನೆ ನೀಡುವ ಬಗ್ಗೆ ಆದೇಶ.
2) ಪ್ರಾಧಿಕಾರದ ಸಂ:ಸಚುಆ/ಚುನಾವಣೆ/8/2014 ದಿನಾಂಕ 18-3-2014 ರಲ್ಲಿ ಚುನಾವಣೆಗೆ ಪೋಲೀಸ್ ಸಿಬ್ಬಂದಿಯನ್ನು ಒದಗಿಸುವಿಕೆ ಮತ್ತು ಬಂದೋಬಸ್ತ್ ಕರ್ತವ್ಯದ ಸಂಬಂದ ಸಿಬ್ಬಂದಿ ಒದಗಿಸಿದ ಬಗ್ಗೆ ಶುಲ್ಕ ನಿಗದಿಪಡಿಸುವ ಕುರಿತು ಸುತ್ತೋಲೆ.
3) ಸಹಕಾರ ಚುನಾವಣಾ ಪ್ರಾಧಿಕಾರದ ಪತ್ರ ಸಂಖ್ಯೆ:ಸಚುಅ/ಬೆಂ.ವಿ/128/2014 ದಿನಾಂಕ 27-08-2014.

***

1. ರಾಜ್ಯದ ಹಲವು ಜಿಲ್ಲೆಗಳಿಗೆ ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರು ಪ್ರವಾಸ ಕೈಗೊಂಡಾಗ ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಅಲ್ಲಿನ ಸ್ಥಳೀಯ ಅಧಿಕಾರಿಗಳು ಬಹುತೇಕ ಸಹಕಾರ ಸಂಘಗಳ/ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ರಿಟರ್ನಿಂಗ್ ಆಫೀಸರ್‌ಗಳು ಹೆಚ್ಚಿನ ಮೊತ್ತದ ಮುಂಗಡ ಹಣಕ್ಕಾಗಿ ಬೇಡಿಕೆ ಇಟ್ಟು, ಮುಂಗಡ ಹಣ ಪಡೆಯುತ್ತಿರುವ ಅಂಶವನ್ನು ಆಯುಕ್ತರ ಗಮನಕ್ಕೆ ತಂದಿರುತ್ತಾರೆ.

2. ಈ ರೀತಿ ಮುಂಗಡ ಹಣವನ್ನು ಪಡೆಯಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಆದಾಗ್ಯೂ ರಿಟರ್ನಿಂಗ್ ಆಫೀಸರ್‌ಗಳಿಗೆ ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು ಕಾನೂನು ಬಾಹಿರವಾಗಿ ಹೆಚ್ಚಿನ ಮೊತ್ತವನ್ನು ನೀಡುತ್ತಿರುವುದು, ಚುನಾವಣೆ ನಂತರ ಈ ಮುಂಗಡಕ್ಕೆ ಅವಶ್ಯಕತೆಗಿಂತ ಹೆಚ್ಚಿನ ಹಣವನ್ನು ಚುನಾವಣಾ ವೆಚ್ಚದ ಹೆಸರಿನಲ್ಲಿ ಖರ್ಚುಮಾಡುತ್ತಿರುವುದು ಮತ್ತು ಸುಳ್ಳು ಲೆಕ್ಕ ಸೃಷ್ಟಿಸುತ್ತಿರುವುದು ಇದರಿಂದಾಗಿ ಆರ್ಥಿಕ ಸ್ಥಿತಿ ಕ್ಷೀಣಿಸಲು ಸಹಕಾರ ಸಂಘಗಳ/ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ರಿಟರ್ನಿಂಗ್ ಆಫೀಸರ್‌ಗಳು ಕಾರಣರಾಗುತ್ತಿರುವುದು ಸಹಕಾರ ಚುನಾವಣಾ ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಈ ಅಂಶವನ್ನು ಪ್ರಾಧಿಕಾರವು ಗಂಭೀರವಾಗಿ ಪರಿಗಣಿಸಿರುತ್ತದೆ.

3. ಉಲ್ಲೇಖ(1)ರ ಪ್ರಾಧಿಕಾರದ ಆದೇಶದಲ್ಲಿ ಸಹಕಾರ ಸಂಘಗಳ ನಿಬಂಧಕರು ದಿನಾಂಕ: 20-01-2010 ರಂದು ಹೊರಡಿಸಿದ ಸುತ್ತೋಲೆಯನ್ನು ಮಾರ್ಪಡಿಸಿ ಇತ್ತೀಚಿನ ಅಗತ್ಯ ವಸ್ತುಗಳ/ಗ್ರಾಹಕರ ವಸ್ತುಗಳ /ಪ್ರಯಾಣದರ/ ಏರಿಕೆಯನ್ನು ಗಮನದಲ್ಲಿಟ್ಟುಕೊಂಡು ರಿಟರ್ನಿಂಗ್ ಆಫೀಸರ್ ಮತ್ತು ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ನೀಡಬೇಕಾದ ಸಂಭಾವನೆಯನ್ನು ಪರಿಷ್ಕರಿಸುವ ಅವಶ್ಯಕತೆ ಇರುವುದನ್ನು ಮನಗೊಂಡು ದಿನಾಂಕ:25-7-2013 ರಂದು ಚುನಾವಣಾ ಆಯೋಗ ರಚನೆಯಾದ ನಂತರ ಆದೇಶವನ್ನು ಹೊರಡಿಸಲಾಗಿದೆ.

4. ತದನಂತರ ಉಲ್ಲೇಖಿ (2)ರಲ್ಲಿ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ನಡೆಸುವ ಸಂಬಂದ ಕಾನೂನು ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸಲು ಪೋಲೀಸ್ ಇಲಾಖೆಯ ನೆರವು ಅವಶ್ಯಕವಾಗಿರುವುದನ್ನು ಮನಗಂಡು ಈ ಬಗ್ಗೆ ಪ್ರಾಧಿಕಾರದಿಂದ ಪತ್ರ ವ್ಯವಹಾರ ನಡೆಸಿದ ನಂತರ ಸರ್ಕಾರವು ದಿನಾಂಕ: 04-03-2014 ರಂದು ಹೊರಡಿಸಿರುವ ನಡವಳಿಕೆಯಲ್ಲಿ ಸಹಕಾರ ಚುನಾವಣಾ ಆಯೋಗವು ನಡೆಸುವ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆಗೆ ಪೋಲೀಸ್ ಸಿಬ್ಬಂದಿ ಒದಗಿಸುವಿಕೆ ಮತ್ತು ಬಂದೋಬಸ್ತ್ ಕರ್ತವ್ಯದ ಸಂಬಂದ ಶುಲ್ಕ ಪಾವತಿ ದರ ನಿಗದಿಪಡಿಸಿ ಆದೇಶ ಹೊರಡಿಸಿರುವುದನ್ನು ಲಗತ್ತಿಸಿ ಪ್ರಾಧಿಕಾರದಿಂದ ಸುತ್ತೋಲೆ ಹೊರಡಿಸಲಾಗಿದೆ.

5. ಉಲ್ಲೇಖಿ (3)ರಲ್ಲಿ ಪ್ರಾಧಿಕಾರಕ್ಕೆ ದೂರು ಬಂದ ಹಿನ್ನೆಲೆಯಲ್ಲಿ ದೂರು ಅರ್ಜಿಯ ವಿಚಾರಣೆ ನಡೆಸಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರಿಗೆ ಪತ್ರ ಬರೆದು ರಿಟರ್ನಿಂಗ್ ಆಫೀಸರ್ ಅವರು ಮುಂಗಡವನ್ನು ಪಡೆಯಲು ಅವಕಾಶ ಇಲ್ಲದೆ ಇದ್ದಾಗ್ಯೂ ಮುಂಗಡವನ್ನು ಪಡೆದು ಸಕಾಲಕ್ಕೆ ಓಚರ್‌ಗಳನ್ನು ಒದಗಿಸದೆ ಇರುವ ಬಗ್ಗೆ ಶಾಸನಬದ್ದ ವಿಚಾರಣೆ/ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಜವಾಬ್ದಾರಿಯನ್ನು ಗೊತ್ತುಪಡಿಸಿ ಹೆಚ್ಚುವರಿ ಮುಂಗಡ ಹಣ ಪಡೆದಿರುವುದನ್ನು ಸಂಬಂಧಿಸಿದ ಸಂಘಕ್ಕೆ ಮರುಪಾವತಿಸಲು ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ.

6. **ಸಹಕಾರ ಸಂಘಗಳು ಅಧಿನಿಯಮ 39 ಬಿ ರಲ್ಲಿ "ಚುನಾವಣೆಗಳನ್ನು ನಡೆಸುವುದಕ್ಕಾಗಿ ವೆಚ್ಚ" ಚುನಾವಣೆಯ ಸಂಬಂಧದಲ್ಲಿ ಕರ್ತವ್ಯಗಳನ್ನು ನೆರವೇರಿಸಲು ಮತ್ತು ಅಧಿಕಾರಗಳನ್ನು ಚಲಾಯಿಸಲು ನೇಮಕ ಮಾಡಲಾದ ವ್ಯಕ್ತಿಗಳಿಗೆ ಪಾವತಿಸತಕ್ಕ ಪ್ರಯಾಣ ಭತ್ಯೆಗಳು, ದಿನ ಭತ್ಯಗಳು ಮತ್ತು ಇತರೆ ಗೌರವ ಧನ ಸಂದಾಯ ಯಾವುದಾದರೂ ಇದ್ದರೆ ಅದೂ ಸೇರಿ ಯಾವುದೇ ಚುನಾವಣೆಯನ್ನು ನಡೆಸುವ ಖರ್ಚು ವೆಚ್ಚಗಳನ್ನು ಸಂಬಂಧಪಟ್ಟ ಸಹಕಾರ ಸಂಘ/ಸಹಕಾರಿಯು ಭರಿಸತಕ್ಕದ್ದು ಎಂದು ಇರುತ್ತದೆ.**

7. **ಸಹಕಾರ ಸಂಘಗಳ ನಿಯಮಗಳು 1960 ನಿಯಮ 14ಎಎ ಮತ್ತು ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 5ಎಎಫ್ ರಲ್ಲಿ ಯಾವುದೇ ಸಹಕಾರ ಸಂಘದ/ಸಹಕಾರಿಯ ಪ್ರತಿನಿಧಿಗಳ ಅಥವಾ ನಿರ್ದೇಶಕರ ಚುನಾವಣೆಗೆ ಸಂಬಂಧಪಟ್ಟಂತೆ ತಗಲುವ ಲೇಖನಸಾಮಗ್ರಿ, ಅಂಚೆ, ಜೆರಾಕ್ಸ್, ಫ್ಯಾಕ್ಸ್, ಮತಪೆಟ್ಟಿಗೆಗಳ ಬಾಡಿಗೆ, ಅಳಿಸಲಾಗದ ಇಂಕು, ಪೋಲೀಸ್ ಭದ್ರತೆ ಮತ್ತು ಅಂಥ ಇತರ ಎಲ್ಲಾ ವೆಚ್ಚಗಳನ್ನು ಆ ಸಹಕಾರ ಸಂಘವು ಭರಿಸತಕ್ಕದ್ದು. ಸಹಕಾರ ಚುನಾವಣಾ (ಪ್ರಾಧಿಕಾರ)ವು ಕಾಲಕಾಲಕ್ಕೆ ನಿಗದಿಪಡಿಸುವ ದರಗಳಲ್ಲಿ ಮತದಾರರ ಪಟ್ಟಿ ತಯಾರಿಕೆಗೆ, ರಿಟರ್ನಿಂಗ್ ಅಧಿಕಾರಿ, ಸಹಾಯಕ ರಿಟರ್ನಿಂಗ್ ಅಧಿಕಾರಿ, ಪ್ರಿಸೈಡಿಂಗ್ ಅಧಿಕಾರಿ ಮತ್ತು ಇತರ ಚುನಾವಣಾ ಸಿಬ್ಬಂದಿಗೆ ಕೊಡಬೇಕಾದ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳಿಗೆ ಮತ್ತು ಸಂಭಾವನೆಗೆ ಸಂಬಂಧಪಟ್ಟ ವೆಚ್ಚವನ್ನೂ ಸಹ ಸಹಕಾರ ಸಂಘಗಳು/ಸಹಕಾರಿಗಳು ಭರಿಸತಕ್ಕದ್ದು ಎಂದು ಇರುತ್ತದೆ.**

8. ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಸಹಕಾರ ಸಂಘಗಳ/ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರಾಧಿಕಾರದ ಸುತ್ತೋಲೆ ಮತ್ತು ಸಹಕಾರ ಸಂಘಗಳ ಸಹಕಾರಿಗಳ ಅಧಿನಿಯಮ ಮತ್ತು ನಿಯಮಗಳಲ್ಲಿ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ರಿಟರ್ನಿಂಗ್ ಆಫೀಸರ್‌ಗಳು ಹಾಗೂ ಚುನಾವಣಾಧಿಕಾರಿಗಳಿಂದ ನೇಮಕಾತಿ ಮಾಡಲ್ಪಟ್ಟ ರಿಟರ್ನಿಂಗ್ ಆಫೀಸರ್‌ಗಳು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಚುನಾವಣೆ ನಿಮಿತ್ತ ಮತ ಪತ್ರಗಳು(ಬ್ಯಾಲೆಟ್ ಪೇಪರ್) ಮುದ್ರಣದ ವೆಚ್ಚವನ್ನು ಹೊರತು ಪಡಿಸಿ ಇನ್ಯಾವುದೇ ಚುನಾವಣಾ ವೆಚ್ಚಗಳಿಗಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಮುಂಗಡ ಹಣವನ್ನು ಪಡೆಯತಕ್ಕದ್ದಲ್ಲ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಹಕಾರ ಸಂಘದ/ಸಹಕಾರಿಯ ಚುನಾವಣೆಗೆ ಸಂಬಂಧಪಟ್ಟಂತೆ ತಗಲುವ ವೆಚ್ಚಗಳನ್ನು ಸಹಕಾರ ಸಂಘಗಳ/ಸಹಕಾರಿಗಳ ಅಧಿನಿಯಮ ಮತ್ತು ನಿಯಮಗಳಲ್ಲಿ ವಿವರಿಸಿರುವಂತೆ ನಿಯಮಾನುಸಾರ ಮತ್ತು ಪಾರದರ್ಶಕವಾಗಿ ಸಂಘದ ವತಿಯಿಂದಲೇ

ನಿರ್ವಹಿಸತಕ್ಕದ್ದಾಗಿರುತ್ತದೆ. ಅದರಂತೆ ಚುನಾವಣೆ ವೆಚ್ಚವನ್ನು ಪಾರದರ್ಶಕವಾಗಿ ಅವಶ್ಯಕತೆಗನುಗುಣವಾಗಿ ಸ್ಪರ್ಧಾತ್ಮಕ ದರದಲ್ಲಿ ನಿರ್ವಹಿಸಲು ಎಲ್ಲಾ ಅಗತ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು. ಅದೇ ರೀತಿಯಲ್ಲಿ ಚುನಾವಣಾಧಿಕರಿಗಳಿಗೆ/ರಿಟರ್ನಿಂಗ್ ಅಧಿಕಾರಿಗಳಿಗೆ ಚುನಾವಣೆಯನ್ನು ನಿಯಮಾನುಸಾರ ಸುಲಲಿತವಾಗಿ ನಡೆಸುವ ಬಗ್ಗೆ ಅಗತ್ಯ ಎಲ್ಲಾ ನೆರವನ್ನು ನೀಡತಕ್ಕದ್ದು.

(ಎನ್.ಸಿ.ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ

ಇವರಿಗೆ

1. ಸಹಕಾರ ಸಂಘಗಳ ಅಪರ ನಿಬಂಧಕರು, (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
2. ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
3. ಸಹಕಾರ ಸಂಘಗಳ ಜಂಟಿ ನಿಬಂಧಕರು(ಪಟ್ಟಣ ಬ್ಯಾಂಕುಗಳ ವಿಭಾಗ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
4. ಸಹಕಾರ ಸಂಘಗಳ ಜಂಟಿ ನಿಬಂಧಕರು(ಕಾನೂನು ಕೋಶ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
5. ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾಡಾ, ಬೆಳಗಾವಿ, ಕಲಬುರಗಿ ಮತ್ತು ಮೈಸೂರು.
6. ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು,
7. ರಾಜ್ಯದ ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು,

ಕಾರ್ಯವ್ಯಾಪ್ತಿಗೆ ಬರುವ ಎಲ್ಲಾ ಸಹಕಾರ ಸಂಘಗಳು/ಸಹಕಾರಿಗಳಿಗೆ ಕಳುಹಿಸುವ ಬಗ್ಗೆ ಕ್ರಮವಿಡತಕ್ಕದ್ದು.

ಪ್ರತಿಗಳನ್ನು ಮಾಹಿತಿಗಾಗಿ.

1. ಮಾನ್ಯ ಸರ್ಕಾರದ ಅಪರ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು-01.
2. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52
3. ಸಂಪಾದಕರು ಸಹಕಾರ ಪತ್ರಿಕೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.; ನಂ32, 3ನೇ ಮಹಡಿ, ಡಿ ದೇವರಾಜ ಅರಸು ರಸ್ತೆ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001 ಇವರಿಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ನಿಮ್ಮ ಸಹಕಾರ ಪತ್ರಿಕೆಯಲ್ಲಿ ಪ್ರಕಟಿಸಲು ಸೂಚಿಸಿದೆ.
4. ಸಂಪಾದಕರು ಸ್ವಾಭಿಮಾನಿ ಪತ್ರಿಕೆ, ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿ; ನಿರ್ಮಾಣ್ ಕಾಂಪ್ಲೆಕ್ಸ್, ಡಾ:ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ಇವರಿಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ನಿಮ ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಲು ಸೂಚಿಸಿದೆ.
5. ಸಂಪಾದಕರು ಸಹಕಾರ ಪಟ್ಟಣ ಬ್ಯಾಂಕುಗಳ ವಾರಪತ್ರಿಕೆ, ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ; ಕೆ.ಹಚ್.ರಸ್ತೆ, ಬೆಂಗಳೂರು-27 ಇವರಿಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ನಿಮ್ಮ ವಾರ ಪತ್ರಿಕೆಯಲ್ಲಿ ಪ್ರಕಟಿಸಲು ಸೂಚಿಸಿದೆ.